ಅ) ಕೋಡೇರಿಯಲ್ಲಿ ಕಿರು ಮಿನುಗಾರಿಕಾ ಬಂದರನ್ನು ನಿರ್ಮಿಸುವುದು ಆರ್ಥಿಕವಾಗಿ ಸಮಂಜಸವಲ್ಲವೆಂದು ಕೇಂದ್ರಿಯ ಕರಾವಳಿ ಮಿನುಗಾರಿಕಾ ಇಂಜಿನಿಯರಿಂಗ್ ಸಂಸ್ಥೆ, ಬೆಂಗಳೂರು ಇವರು ಅಭಿಪ್ರಾಯ ನೀಡಿರುತ್ತಾರೆ.

ಆ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನ ಕ್ಷಿತಿಜ ನೇಸರ ಧಾಮದ ಅಭಿವೃದ್ಧಿ.

546(529)

ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಬೈಂದೂರು ವತ್ತಿನೆಗೆಯಲ್ಲಿ ಅರಣ್ಯ ಇಲಾಖೆಯಡಿಯಲ್ಲಿ ಬರುವ ಕ್ಷಿತಿಜ ನೇಸರಧಾಮಕ್ಕೆ ಇನ್ನೂ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಸರಕಾರದ ಮುಂದೆ ಏನಾದರೂ ಕಾರ್ಯಕ್ರಮಗಳಿದೆಯೇ?

ಆ) ಇಲ್ಲವಾದಲ್ಲಿ, ಪ್ರವಾಸಿಗಳನ್ನು ಆಕರ್ಷಿಸಲು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗುವುದೇ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೈಂದೂರು ಕ್ಷೇತ್ರದ ಮರವಂತೆ ಕಡಲು ಪ್ರವಾಸೋದ್ಯಮ ಅಭಿವೃದ್ಧಿ.

547(532)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನಸಭಾ ವ್ಯಾಪ್ತಿಯ ಮರವಂತೆ ಕಡಲು ಕಿನಾರೆಯ

ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ?

ಆ) ಹಾಕಿಕೊಳ್ಳದಿದ್ದಲ್ಲಿ, ಕಾರಣಗಳೇನು?

ಇ) ಈಗಲಾದರು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗುವುದೇ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಬೈಂದೂರು ಕ್ಷೇತ್ರದ ಮರವಂತೆ ಕಡಲ ತೀರದಲ್ಲಿ ಹೊನಲು ಬೆಳಕು ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ನಬಾರ್ಡ್‌ನಲ್ಲಿ ಮಂಜೂರಾದ ಮೀನುಗಾರಿಕಾ ರಸ್ತೆಗೆ ಟೆಂಡರ್ ಕರೆಯದಿರುವುದು.

548(534)

ಶ್ರೀ ಗೋಪಾಲಪೂಜಾರಿ ಕೆ. (ಬೈಂದೂರು): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಮೀನುಗಾರಿಕಾ ರಸ್ತೆಗೆ (ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ) ರಿಪೇರಿ ಮಾಡಲು ಹಣ ಬಿಡುಗಡೆಯಾಗದಿರಲು ಕಾರಣಗಳೇನು?

ಆ) ಮೀನುಗಾರಿಕಾ ರಸ್ತೆಗೆ ನಬಾರ್ಡ್ ಮೂಲಕ ಅನುಮತಿ ದೊರಕಿದ್ದರೂ ಟೆಂಡರ್ ಕರೆಯದಿರಲು ಕಾರಣಗಳೇನು?

ಇ) ಮೀನುಗಾರಿಕಾ ರಸ್ತೆ ನಬಾರ್ಡ್ ಮುಖಾಂತರ ಕೆಲಸ ಪೂರ್ಣಗೊಂಡಿದ್ದರೂ ಹಣ ಬಿಡುಗಡೆಯಾಗದಿರಲು ಕಾರಣಗಳೇನು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):